# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 866 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀದರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 13.12.2023 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರೈತರಿಗೆ ಸರ್ಕಾರಿ ಜಮೀನನ್ನು ಕೃಷಿ ಉಪಯೋಗಕ್ಕಾಗಿ ಈ ಹಿಂದೆ ಮಂಜೂರು ಮಾಡಿದ್ದು, ಸದರಿ ಜಮೀನಿನ ಪ್ರತ್ಯೇಕ ಪಹಣಿ ಪಡೆಯಲು ರೈತರಿಗೆ ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರತ್ಯೇಕ ಪಹಣಿಯನ್ನು ಎಷ್ಟು ದಿನಗಳೊಳಗಾಗಿ ರೈತರಿಗೆ ನೀಡಲಾಗುವುದು; | ಮಂಜೂರಾದ ಜಮೀನಿನ ಪ್ರತ್ಯೇಕ ಪಹಣಿ ಪಡೆಯಲು ದರಖಾಸ್ತು ಪೋಡಿ ಪ್ರಕರಣಗಳ ಬಾಬ್ತು ನಮೂನೆ 1 ರಿಂದ 5 ನ್ನು ಭರ್ತಿ ಮಾಡಿ, ಆಕಾರ್ ಬಂದ್ ವಿಸ್ತೀರ್ಣಕ್ಕೆ ಪಹಣಿ ಕಲಂ 3 ಮತ್ತು 9ನ್ನು ತಾಳೆ ಮಾಡಿ ಮಂಜೂರು ದಾಖಲೆಗಳ ನೈಜತೆ ಪರಿಶೀಲನೆ, ಗೈರು ವಿಲೇಯಾದ ಕಡತಗಳ ಪುನರ್ ನಿರ್ಮಾಣ ಹಕ್ಕುದಾಖಲೆಗಳ ಹಾಗೂ ಸ್ವಾಧೀನಾನುಭವಗಳಿಗೆ ವ್ಯತ್ಯಾಸ ತಕರಾರು ಅರ್ಜಿಗಳು, ಸ್ಕೇಲ್ ನಂಬರ್‌ಗೆ ಟಿಪ್ಪಣಿ ತಯಾರಿಸುವುದು, ಅಳತೆ ಮತ್ತು ದುರಸ್ಥಿ ಕಾರ್ಯದ ಹಂತಗಳನ್ನು ನಿಯಮಾನುಸಾರ ಕ್ರಮ ಕೈಗೊಂಡು, ಪ್ರತ್ಯೇಕ ಪಹಣಿ ನೀಡಲು ಕ್ರಮವಹಿಸಲಾಗುತ್ತಿದೆ. |
| ಆ. | ಮಂಜೂರಾದ ಜಮೀನಿನ ರೈತರು ದುರಸ್ತು ಮಾಡಿಕೊಡಲು ಪ್ರಸ್ತಾವನೆ ಸಲ್ಲಿಸುವ ಸಂದರ್ಭಗಳಲ್ಲಿ ಸದರಿ ಜಮೀನನ್ನು ದುರಸ್ತು, ಸ್ಕೆಚ್ ಮಾಡಿ ರೈತರಿಗೆ ಹದ್ದುಬಸ್ತು ಗುರುತಿಸಿ ಪ್ರತ್ಯೇಕ ಪಹಣಿ ನೀಡಲಾಗುತ್ತಿದೆಯೇ; ನೀಡಲಾಗದಿದ್ದಲ್ಲಿ, ಕಾರಣಗಳೇನು ಹಾಗೂ ಸದರಿ ಸಮಸ್ಯೆಗೆ ಪರಿಹಾರವೇನು; | ಮಂಜೂರಾದ ಜಮೀನಿನ ಪೋಡಿ ದುರಸ್ತು ಕುರಿತು ಸದರಿ ಜಮೀನಿನ ಅಳತೆ ಮಾಡಿ, ಗಡಿ ಗುರ್ತಿಸಿ ನಕ್ಷೆ (ಸ್ಕೆಚ್) ತಯಾರಿಸಿ ನಿಯಮಾನುಸಾರ ದುರಸ್ತಿಪಡಿಸಿ ಹೊಸ ನಂಬರ್ ನೀಡಿ, ಪ್ರತ್ಯೇಕ ಪಹಣಿ ನೀಡಲಾಗುತ್ತಿದೆ.<br><br>ರಾಜ್ಯದಲ್ಲಿ ಮಂಜೂರಾದ ಜಮೀನುಗಳ ಪೋಡಿ ದುರಸ್ತಿ ಕೋರಿ ಕಳೆದ 3 ವರ್ಷಗಳಲ್ಲಿ ಅಂದರೆ ದಿನಾಂಕ:1.4.2021ರಿಂದ ಈವರೆಗೆ ಸ್ವೀಕೃತವಾದ 2787 ಅರ್ಜಿಗಳು ಹಾಗೂ ಹಿಂದಿನ ಬಾಕಿ 944 ಅರ್ಜಿಗಳು ಸೇರಿ ಒಟ್ಟು 3731 ಅರ್ಜಿಗಳು ಇದ್ದು, ಈ ಪೈಕಿ 2521 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು 1210 ಪ್ರಕರಣಗಳು ಸರ್ವೆ ಶಾಖೆಯ ನಡವಳಿಗಳ ನಂತರ ಕಂದಾಯ ಕ್ರಮದ ಹಂತದಲ್ಲಿರುತ್ತದೆ.<br><br>ಮಂಜೂರಿ (ದರಖಾಸ್ತು) ಪೋಡಿ ಪ್ರಕರಣಗಳಲ್ಲಿ ಆಕರ್‌ಬಂದ್ ಮತ್ತು ಪಹಣಿಗಳು ಮತ್ತು ಪಹಣಿ ಕಾಲಂ 3 & 9 ರಲ್ಲಿನ ವಿಸ್ತೀರ್ಣಗಳ ವ್ಯತ್ಯಾಸ, ಜಮೀನಿನ ವಾಸ್ತವಾಂಶ ಸ್ಥಿತಿಯನ್ನು ನಿರೂಪಿಸುವಂತಹ ನಮೂನೆಯಾದ ನಮೂನೆ 1 ರಿಂದ 5 ಭರ್ತಿಮಾಡಲು ಬೇಕಾಗಿರುವ ಮೂಲ ಮಂಜೂರಾತಿ ದಾಖಲೆಗಳು ಲಭ್ಯವಿಲ್ಲದೇ ಇರುವುದು ಹಾಗೂ ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವಿವಾದಗಳಿರುವ ಪ್ರಕರಣಗಳಲ್ಲಿ ಪೋಡಿ ದುರಸ್ತಿ ಕಾರ್ಯಗಳನ್ನು ನಿರ್ವಹಿಸಲು ವಿಳಂಬವಾಗುತ್ತಿದೆ.<br><br>ಮಂಜೂರಿ (ದರಖಾಸ್ತು) ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ:<br><br>ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗೈರು ವಿಲೇ ಕಡತ ಪುನರ್ನಿರ್ಮಾಣದ ಸಮಿತಿಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ 74 ಎಲ್.ಜಿಪಿ 2009 ದಿ:17.9.2009 ಮತ್ತು ಕಂಇ 08 ಎಲ್.ಜಿ.ಪಿ 2016 ದಿ:20.6.2016 & ದಿ:18.7.2016ರಡಿ ಸೂಚಿಸಲಾಗಿದೆ. |

| | | |
|---|---|---|
| | | ಸರ್ಕಾರದ ನಿರ್ದೇಶನದಂತೆ ಮಂಜೂರಿಗೆ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲಾಗುತ್ತಿದೆ. ನಮೂನೆ 1 ರಿಂದ 5 ಗಳನ್ನು ಡಿಜಿಟೈಸ್ ಮಾಡಿ ನೇರವಾಗಿ ಮೋಜಿಣಿ ತಂತ್ರಾಂಶದ ಮುಖಾಂತರ ಅಳತೆ ಮಾಡಿ ನಮೂನೆ 6 ರಿಂದ 10 ಗಳನ್ನು ತಯಾರಿಸುವುದನ್ನು ಆಂದೋಲನದ ರೂಪದಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಾಲಕಾಲಕ್ಕೆ ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ. |
| ಇ. | ಮಂಜೂರಾದ ಜಮೀನುಗಳ ಪರಭಾರೆ ಅವಧಿ ಮುಗಿದ ನಂತರ ಎಲ್ಲಾ ವರ್ಗದ ರೈತರು ಆರ್ಥಿಕ ಸಮಸ್ಯೆ ಹಾಗೂ ಇನ್ನಿತರೇ ಸಮಸ್ಯೆಗಳಿದ್ದಲ್ಲಿ, ಮಂಜೂರಾದ ಜಮೀನನ್ನು ನೇರವಾಗಿ ಮಾರಾಟ ಮಾಡಬಹುದೇ; ಇಲ್ಲವಾದಲ್ಲಿ, ಜಮೀನು ಮಾರಾಟ ಮಾಡಲು ಸದರಿ ರೈತರಿಗೆ ಇರುವ ಮಾರ್ಗಗಳೇನು; | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಎ, 94-ಬಿ ಹಾಗೂ 94-ಎ(4) ರಡಿಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಕೆಲವು ಭೂಮಿಗಳ ವರ್ಗಾವಣೆ ನಿಷೇದ) ಅಧಿನಿಯಮ, 1978 ಮತ್ತು 1979ರ ನಿಯಮಗಳಿಗೆ ಒಳಪಡುವ ಜಮೀನುಗಳಿಗೆ ಪರಭಾರೆ ಅವಧಿ ಮುಗಿದ ನಂತರ ಜಮೀನನ್ನು ಮಾರಾಟ ಮಾಡಲು ಸರ್ಕಾರದಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಮುಂದುವರೆದು, ಇತರೆ ವರ್ಗದವರಿಗೆ ಮಂಜೂರಾದ ಪ್ರಕರಣಗಳಲ್ಲಿ ಪರಭಾರೆ ಅವಧಿ ಮುಗಿದ ನಂತರ ಜಮೀನನ್ನು ಮಾರಾಟ ಮಾಡಲು ನಿರಾಕ್ಷೇಪಣಾ ಪತ್ರಗಳನ್ನು ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್ ರವರು ನೀಡಲು ಕ್ರಮವಹಿಸಬಹುದಾಗಿದೆ. |
| ಈ. | ಮಂಜೂರಾದ ಜಮೀನುಗಳ ಪರಭಾರೆ ಅವಧಿ ಮುಗಿದ ನಂತರ ಎಲ್ಲಾ ವರ್ಗದ ರೈತರು ಆರ್ಥಿಕ ಸಮಸ್ಯೆ ಹಾಗೂ ಇನ್ನಿತರೇ ಸಮಸ್ಯೆಗಳಿದ್ದಲ್ಲಿ ಮಂಜೂರಾದ ಜಮೀನನ್ನು ಮಾರಾಟ ಮಾಡಲು ಅನುಮತಿ ನೀಡುವ ಪ್ರಾಧಿಕಾರ ಯಾವುದು; (ಮಾಹಿತಿ ನೀಡುವುದು) | |
| ಉ. | ಮಂಡ್ಯ ಜಿಲ್ಲೆಯಲ್ಲಿ ಇದುವರೆವಿಗೂ ಅನುಮತಿ ಕೋರಿ ಬಂದ ಅರ್ಜಿಗಳೆಷ್ಟು; ಅನುಮತಿ ನೀಡಲಾದ ಅರ್ಜಿಗಳೆಷ್ಟು? (ಮಾಹಿತಿ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ಇದುವರೆವಿಗೂ ಅನುಮತಿ ಕೋರಿ ಒಟ್ಟು 5 ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಅರ್ಜಿಗಳ ಬಗ್ಗೆ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಕಂಇ 178 ಟಿಆರ್ಎಂ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು